25

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್-2979/2015

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ: 06/01/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ನವೀನ್ ಜೋಸೆಫ್, ಹಿಂದಿನ ತಹಶೀಲ್ದಾರ್, ತಾಲ್ಲೂಕು ಕಛೇರಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ರವರು ಸಾರ್ವಜನಿಕ ನೌಕರರಾಗಿದ್ದು ದುರ್ವರ್ತನೆಯಿಂದ ನಡೆದುಕೊಂಡಿದ್ದುದರ ನಡವಳಿಕೆ – ಕುರಿತು.

*****

ಶ್ರೀ ಆರ್.ನೇತ್ರಾವತಿ ಕೋಂ ಎಂ.ರಾಜೇಶ್ ಪಳನಿ, ನಂ. 10, ಎಂ.ಸಿ.ಎಂ., ಫಾರಂ ರಸ್ತೆ, ಕನಕಗಿರಿ, ವಿದ್ಯಾರಣ್ಯಪುರಂ, ಮೈಸೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ ನವೀನ್ ಜೋಸೆಫ್, ತಹಶೀಲ್ದಾರ್, ತಾಲ್ಲೂಕು ಕಛೇರಿ, ಮೈಸೂರು ಜಿಲ್ಲೆ, ಮೈಸೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದಾಖಲಿಸಿ ದೂರುದಾರರು ಮೈಸೂರು ತಾಲ್ಲೂಕಿನ ಕಸಬಾ ಹೋಬಳಿಗೆ ಸೇರಿದ ಸರ್ವೆ ನಂ. 109/20 ರಲ್ಲಿ 0.4 ಗುಂಟೆ ಅನ್ಯಕ್ರಾಂತಕ್ಕೆ ಅರ್ಜಿ ಸಲ್ಲಿಸಿ, ಅನ್ಯಕ್ರಾಂತ ಮಾಡಿಸಿಕೊಳ್ಳುತ್ತಿದ್ದು, ಸದರಿ ಜಾಗದಲ್ಲಿ ದೂರುದಾರರು ESSAR Oil Ltd., Bengaluru ರವರೊಂದಿಗೆ ಪೆಟ್ರೋಲ್ ಮತ್ತು ಡೀಸಲ್ ಬಂಕ್ ಅನ್ನು ನಡೆಸುವ ಉದ್ಧೇಶದಿಂದ ಅಡ್‌ಹಾಕ್ ನಕ್ಷೆಯನ್ನು ಭಾರತ ಸರ್ಕಾರದ ಎಕ್ಸಪ್ಲೋಸಿವ್ ಇಲಾಖೆಯಿಂದ ಪಡೆದು ದಿನಾಂಕ: 25/07/2014 ರಂದು ಎನ್.ಓ.ಸಿ., ಪಡೆಯುವ ಸಲುವಾಗಿ ಮೈಸೂರಿನ ಪೋಲೀಸ್ ಆಯುಕ್ತರಿಗೆ ESSAR Oil Ltd., Bengaluru ರವರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆಂದು, ಈ ಸಂಬಂಧ ಎಂಟು ಇಲಾಖೆಗಳಿಂದ ಅಭಿಪ್ರಾಯ ಪಡೆದಿದ್ದು, ಅಂತಿಮವಾಗಿ ಪೋಲೀಸ್ ಆಯುಕ್ತರು, ಮೈಸೂರು ರವರು ದಿನಾಂಕ: 25/02/2015 ರಂದು ಮೈಸೂರಿನ ತಹಶೀಲ್ದಾರ್ ರವರಿಗೆ ಜಾಗದ ದಾಖಲಾತಿ ಪರಿಶೀಲಿಸಿ ವರದಿ ನೀಡುವಂತೆ

ತಿಳಿಸಿದ್ದು, ಈ ಸಂಬಂಧ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ರಾಜಸ್ವ ನಿರೀಕ್ಷಕರು ರವರುಗಳು ಪ್ರತ್ಯೇಕವಾಗಿ ವರದಿ ಸಲ್ಲಿಸಿರುತ್ತಾರೆಂದು ಹಾಗೂ ಎದುರುದಾರರಾದ ತಹಶೀಲ್ದಾರ್ ರವರು ಸಹಾ ಖುದ್ದಾಗಿ ಸ್ಥಳ ಪರಿಶೀಲಿಸಿ ದಾಖಲಾತಿಗಳನ್ನು ಪಡೆದಿದ್ದರೂ ಸಹಾ, ಇದುವರೆವಿಗೂ ಮೈಸೂರಿನ ಪೋಲೀಸ್ ಆಯುಕ್ತರಿಗೆ ವರದಿಯನ್ನು ಸಲ್ಲಿಸದೇ ವಿಳಂಬ ಮಾಡುತ್ತಿದ್ದಾರೆಂದು, ಈ ಬಗ್ಗೆ ದೂರುದಾರರ ಪತಿ ಹಲವಾರು ಬಾರಿ ಎದುರುದಾರರನ್ನು ಬೇಟಿ ಮಾಡಿ ಮನವಿ ಮಾಡಿಕೊಂಡರೂ ಸಹಾ, ಯಾವುದೇ ಪ್ರಯೋಜವಾಗಿರುವುದಿಲ್ಲವೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರ ದೂರಿಗೆ ಸಂಬಂಧಿಸಿದಂತೆ, ಎದುರುದಾರರಾದ ತಹಶೀಲ್ದಾರ್ ರವರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಿ ಈ ಕಛೇರಿಯಿಂದ ದಿನಾಂಕ: 06/08/2015 ರಂದು ಆರ್.ಪಿ.ಎ.ಡಿ., ಮುಖಾಂತರ ನೋಟಿಸ್ ಕಳುಹಿಸಲಾಗಿರುತ್ತದೆ. ಆದರೆ, ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಈ ಸಂಬಂಧ, ಮತ್ತೆ ಮತ್ತೆ ದಿನಾಂಕ: 05/08/2015 ರಂದು ಮೈಸೂರಿನ ಲೋಕಾಯುಕ್ತ ಪೋಲೀಸ್‌ರ ಮುಖಾಂತರ ನೆನಪೋಲೆಯನ್ನು ಎದುರುದಾರರಿಗೆ ಕಳುಹಿಸಲಾಗಿದ್ದು, ಎದುರುದಾರರು ಖುದ್ದಾಗಿ ಸದರಿ ಪತ್ರವನ್ನು ಸ್ವೀಕರಿಸಿದರೂ ಸಹಾ, ಇದುವರೆವಿಗೂ ಯಾವುದೇ ಆಕ್ಷೇಪಣೆಯಾಗಲೀ ಅಥವಾ ಉತ್ತರವಾಗಿ ಸಲ್ಲಿಸಿರುವುದಿಲ್ಲ. ಇದ್ದರಿಂದ, ಎದುರುದಾರರಿಗೆ ದೂರುದಾರರ ದೂರಿನ ಮೇಲೆ ಏನು ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಕಡತವನ್ನು ಅಂತಿಮ ಪರಿಶೋಧನೆ ಟಿಪ್ಪಣಿಗಾಗಿ post ಮಾಡಲಾಗಿದೆ.

3. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ಎದುರುದಾರರು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ದೂರುದಾರರು ESSAR Oil Ltd., Bengaluru ರವರೊಂದಿಗೆ ಪೆಟ್ರೋಲ್ ಮತ್ತು ಡೀಸಲ್ ಬಂಕ್ ಅನ್ನು ನಡೆಸುವ ಉದ್ಧೇಶದಿಂದ ಅಡ್‌ಹಾಕ್ ನಕ್ಷೆಯನ್ನು ಭಾರತ ಸರ್ಕಾರದ ಎಕ್ಸಪ್ಲೋಸಿವ್ ಇಲಾಖೆಯಿಂದ ಪಡೆದು ದಿನಾಂಕ: 25/07/2014

ರಂದು ಎನ್.ಓ.ಸಿ., ಪಡೆಯುವ ಸಲುವಾಗಿ ಮೈಸೂರಿನ ಪೋಲೀಸ್ ಆಯುಕ್ತರಿಗೆ ESSAR Oil Ltd., Bengaluru ರವರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ.

- ಈ ಸಂಬಂಧ ಪೋಲೀಸ್ ಆಯುಕ್ತರು, ಮೈಸೂರು ರವರು ದಿನಾಂಕ: 25/02/2015 ರಂದು ಮೈಸೂರಿನ ತಹಶೀಲ್ದಾರ್ ರವರಿಗೆ ಜಾಗದ ದಾಖಲಾತಿ ಪರಿಶೀಲಿಸಿ, ಉದ್ದೇಶಿತ ಜಾಗದ ದಾಖಲಾತಿಗಳು ಕ್ರಮಬದ್ದವಾಗಿವೆಯೇ ಎಂದು ಪರಿಶೀಲಿಸಿ ವರದಿ ನೀಡುವಂತೆ ತಿಳಿಸಿರುತ್ತಾರೆ.

- ಈ ಸಂಬಂಧ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ರಾಜಸ್ವ ನಿರೀಕ್ಷಕರು ರವರುಗಳು ಪ್ರತ್ಯೇಕವಾಗಿ ವರದಿ ಸಲ್ಲಿಸಿದ್ದರೂ ಸಹಾ, ಹಾಗೂ ಎದುರುದಾರರು ಖುದ್ದಾಗಿ ಸ್ಥಳ ಪರಿಶೀಲಿಸಿ ದಾಖಲಾತಿಗಳನ್ನು ಪಡೆದಿದ್ದರೂ ಸಹಾ, ಮೈಸೂರಿನ ಪೋಲೀಸ್ ಆಯುಕ್ತರಿಗೆ ವರದಿಯನ್ನು ಸಲ್ಲಿಸಿರುವುದಿಲ್ಲ ಎಂಬುದು ದೂರುದಾರರ ಆಪಾದನೆಯಾಗಿದೆ.

- ಇದಕ್ಕೆ ಸಂಬಂಧಪಟ್ಟಂತೆ ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಿ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸನ್ನು ಎದುರುದಾರರೇ ಖುದ್ದಾಗಿ ಸ್ವೀಕರಿಸಿದರೂ ಸಹಾ, ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

- ಸದರಿ ಆಕ್ಷೇಪಣೆಯನ್ನು ಸಲ್ಲಿಸದೇ ಇರುವುದನ್ನು ಗಮನಿಸಿದಾಗ, ಎದುರುದಾರರು ಉದ್ದೇಶ ಪೂರ್ವಕವಾಗಿಯೇ ಮೈಸೂರಿನ ಪೋಲೀಸ್ ಆಯುಕ್ತರಿಗೆ ವರದಿಯನ್ನು ಸಲ್ಲಿಸಲು ವಿಳಂಬ ನೀತಿ ಅನುಸರಿಸಿ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4. ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ 'ಎದುರುದಾರ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 'ಎದುರುದಾರರು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

5. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, 'ಎದುರುದಾರರು' ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 'ಎದುರುದಾರರು' ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ **ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ,** ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಮೂರು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 6/1/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**

6/1/17